ಶ್ರೀ ಸಿ. ಭೈರೇಗೌಡ:- ತಮಗೆ ಧನ್ಯವಾದಗಳು, ಈ ಸಿಇಟಿ ವಿಚಾರದ ಬಗ್ಗೆ ನಾವು ಪ್ರಾರಂಭದಲ್ಲಿಯೇ ಪ್ರಸ್ತಾಪ ಮಾಡಿದ್ದೇವೆ. ತಾವು ಹೇಳಿದ ಹಾಗೆ ಇವತ್ತೂ ಮಾತನಾಡಿರತಕ್ಕಂತಹ ಅನೇಕ ಜನರು ಎಲ್ಲಾ ಭಾಗದಿಂದಲೂ ಮಾತನಾಡಿದ್ದಾರೆ. ಆದರೆ ಇಲ್ಲಿಯವರೆವಿಗೂ ಕೂಡ ಈ ಸಮಸ್ಯೆಯ ಬಗೆಹರಿದಿಲ್ಲ. ಇದು ನಮ್ಮೆಲ್ಲರನ್ನೂ ಇವತ್ತಿನ ದಿವಸ ಚಿಂತೆಗೆ ಈಡು ಮಾಡಿರುವುದು; ಇದು ಈಗಿರುವಂತಹ ಸಮಸ್ಯೆಯಾಗಿದೆ. ಇಲ್ಲಿಯವರೆವಿಗೂ ಕೂಡ ಅದು ಬಗೆಹರಿದಿಲ್ಲ. ಪ್ರತಿ ದಿವಸಗಳು ಪತ್ರಿಕೆಗಳನ್ನು ನೋಡುತ್ತಿದ್ದರೆ ಪ್ರತಿ ದಿವಸವು ಒಂದೊಂದು ರೀತಿಯಾದ ನಿಲುವನ್ನು ಪ್ರತಿ ದಿವಸ ಒಂದೊಂದು ರೀತಿಯ ಟರ್ನ್ ಈ ವಿಚಾರವು ತೆಗೆದುಕೊಳ್ಳುತ್ತಿದೆ. ಆದ್ದರಿಂದ ಇವತ್ತಿನ ದಿವಸ ಇಂತಹ ಪ್ರಮುಖವಾದಂತಹ ವಿಚಾರ, ಇದು ಆಗಲಿಲ್ಲ. ಆದರೆ ನಾನು ಇವತ್ತಿನದಿವಸ ಕೆಲವು ವಿಚಾರಗಳನ್ನು ಸ್ಪಷ್ಟಿಸಿಕೊಳ್ಳಬೇಕಾಗಿದೆ. ಮೊನ್ನೆ ದಿವಸ ಇದೇ ಸದನದಲ್ಲಿ ಕರ್ನಾಟಕದ ಉತ್ತರ ಭಾಗ ಮತ್ತು ದಕ್ಷಿಣ ಭಾಗದಲ್ಲಿ ಇರತಕ್ಕಂತಹ ತಾರತಮ್ಯದ ಬಗ್ಗೆ ಎಷ್ಟೆಷ್ಟು ಕಾಳಜಿಗಳು ಏನೇನು ಆಗಿವೆ ಎನ್ನುವುದರ ಬಗ್ಗೆಯೂ ಕೂಡ ಚರ್ಚೆಯಾಯಿತು. ಉತ್ತರ ಕರ್ನಾಟಕದಲ್ಲಿರತಕ್ಕಂತಹ...

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೆ, ಸುಪ್ರೀಂ ಕೋರ್ಟ್...

ಶ್ರೀ ಸಿ. ಭೈರೇಗೌಡ:- ಹೌದು ಸ್ವಾಮಿ, ಇಷ್ಟು ಸಿಂಪಲ್ ಆಗಿರತಕ್ಕಂತಹದ್ದನ್ನೂ ಕೂಡ, ಅವರು ಒಪ್ಪಿಕೊಂಡಿರತಕ್ಕಂತಹ ವಿಚಾರವನ್ನು ಕೂಡ ನಿಮ್ಮ ಕೈಯಲ್ಲಿ ಬಗೆಹರಿಸುವುಕ್ಕಾಗುತ್ತಿಲ್ಲ.

ಅಧ್ಯಕ್ಷರು:- ಭೈರೇಗೌಡರೆ, ತಾವು ಬೇಗನೆ ಮುಗಿಸಿ.

ಶ್ರೀ ಸಿ. ಭೈರೇಗೌಡ:- ಇವರ ಕೈಯಲ್ಲಿ ಬಗೆ ಹರಿಸುವುದಕ್ಕೆ ಸಾಧ್ಯವಾಗುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ:- ಇವರು ಹೇಳಬೇಕಾದ್ದನ್ನು ಏನೂ ಹೇಳುವುದಿಲ್ಲ. ಬಾಕಿ ಊರ ತುಂಬಾ ಸುತ್ತಿ ಹೇಳುತ್ತಾರೆ. ನೀವು ಒಂದು ಪಕ್ಷದ ಅಧ್ಯಕ್ಷರಾಗಿದ್ದೀರಿ, ಊರಿಗೆ ಗೌಡರೂ ಆಗಿದ್ದೀರಿ, ಇದರ ಬಗ್ಗೆ ನಾನು ಕೇಳುವುದೆಂದರೆ, ಸುಪ್ರಿಂ ಕೋರ್ಟಿನ ಹಿನ್ನೆಲೆಯಲ್ಲಿ ಯಾವ ತರಹ ತೀರ್ಮಾನ ಮಾಡಬೇಕೆಂಬುದರ ಬಗ್ಗೆ ಎರಡು ಸೆಂಟ್ನ್ಸ್‌ನಲ್ಲಿ ಹೇಳಿ ನೋಡೋಣ?

ಶ್ರೀ ಸಿ. ಭೈರೇಗೌಡ:- ಇಲ್ಲಿ ಚರ್ಚೆಯಾಗಿದೆ. ಸುಪ್ರಿಂ ಕೋರ್ಟಿನ ವಿಚಾರದಲ್ಲಿ ನಮ್ಮ ಸೋಮಶೇಖರ್‌ರವು ಹೇಳಿದರು.

ಶ್ರೀ ಜಗದೀಶ್ ಶೆಟ್ಟರ್:- ನಿಮ್ಮದು ಏನು ಸ್ಟ್ಯಾಂಡ್ ಅಂತ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ:- ನಮ್ಮ ಸ್ಟ್ಯಾಂಡ್‌ನ್ನು ನಾವು ಹೇಳುತ್ತೇವೆ. ನಿಮ್ಮ ಸ್ಟ್ಯಾಂಡ್ ಏನಿದೆ ಅದನ್ನು ಹೇಳಿ.

ಶ್ರೀ ಜಗದೀಶ್ ಶೆಟ್ಟರ್:- ಏನಿದೆ ಅದು ಹೇಳಿ.

(ಗೊಂದಲ)

(ಈ ಸಂದರ್ಭದಲ್ಲಿ ಬಿಜೆಪಿ ಸದಸ್ಯರುಗಳು ಜೆ.ಡಿ. (ಎಸ್), (ಜೆಡಿ) (ಯು) ನ ಸದಸ್ಯರುಗಳು ಸದನದ ಬಾವಿಗೆ ಬಂದರು)

ಶ್ರೀ ಜಗದೀಶ್ ಶೆಟ್ಟರ್:- ಸರ್ಕಾರದವರು ಇದನ್ನು ಬಹಳ ಕ್ಯಾಷ್ಯುಯಲ್ ಆಗಿ ತೆಗೆದುಕೊಂಡಿದ್ದಾರೆ. ಇದು ಸರಿಯಲ್ಲ, ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಹೇಳಲಿ.